# ಹೋಮಿಯೊ ಲೈಫ್

**ಡಾ. ಟಿ. ಕಿರಣ್ ಕುಮಾರ್**
ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು
ಪಾಸಿಟಿವ್ ಹೋಮಿಯೋಪತಿ
ವೈದ್ಯರ ಸಮಾಲೋಚನೆಗಾಗಿ
**9686199983**
www.positivehomeopathy.com



## ಡಾಕ್ಟರ್
## 1 ತಿಂಗಳಲ್ಲಿ ನಾನು 10 ಕಿ.ಗ್ರಾಂ ತೂಕ ಹೆಚ್ಚಿಸಿಕೊಂಡೆ

**ಹಾಯ್ ಓದುಗರೆ,**

ನಾನು **ಡಾ. ಕಿರಣ್ ಕುಮಾರ್,** ನಾನು ನನಗೆ ಉಂಟಾದ ಒಂದು ಅನುಭವವನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಬಯಸುತ್ತಿದ್ದೇನೆ...

ಈಗ್ಗೆ 1 ವರ್ಷದ ಕೆಳಗೆ ರೋಗಿಯೊಬ್ಬರು ನನ್ನ ಬಳಿಗೆ ಬಂದಿದ್ದರು. ಅವರ ಮುಖದಲ್ಲಿ ತೀವ್ರ ಆತಂಕದ ಛಾಯೆ ತುಂಬಿತ್ತು. ಅವರು ತಮ್ಮ ಸಮಸ್ಯೆಗಳನ್ನು ಈ ಕೆಳಗಿನಂತೆ ಹೇಳಿಕೊಂಡರು...

> “ಡಾಕ್ಟ್ರೇ, ನಾನೊಬ್ಬ ಸಾಫ್ಟ್‌ವೇರ್ ಉದ್ಯೋಗಿ. ಕಳೆದ ತಿಂಗಳಲ್ಲಿ ನನ್ನ ತೂಕ 75 ಕಿ.ಗ್ರಾಂ ಆಗಿತ್ತು. ಆದರೆ ಈಗ 85 ಕಿ.ಗ್ರಾಂ ಆಗಿದೆ. ನನಗೆ, ಈಗೀಗ ಕೆಲಸದಲ್ಲಿ ತುಂಬಾ ದಣಿವಾದಂತೆ ಭಾಸವಾಗುತ್ತಿದೆ ಮತ್ತು ಹಸಿವಾದಂತೆ ಅನಿಸುತ್ತಿಲ್ಲ. ಇತ್ತೀಚೆಗೆ ಮಲಬದ್ಧತೆ ಕೂಡ ಬಾಧಿಸುತ್ತಿದೆ. ಇದನ್ನೆಲ್ಲ ಕಂಡು ನನಗೇಕೊ ಭಯವಾಗುತ್ತಿದೆ ಡಾಕ್ಟ್ರೇ! ದಯವಿಟ್ಟು ನನಗೆ ಏನಾಗಿದೆ ಅಂತಾ ಪರೀಕ್ಷಿಸಿ ನೋಡಿ.”

ರೋಗಿಯ ಮಾತುಗಳನ್ನು ಗಮನವಿಟ್ಟು ಆಲಿಸಿ ಮುಗುಳ್ನಕ್ಕು ಈ ಕೆಳಗಿನ ತಪಾಸನೆಗಳನ್ನು ಮಾಡಿಸಿಕೊಳ್ಳಿ ಎಂದು ಸೂಚಿಸಿದೆ. 1. ಥೈರಾಯ್ಡ್ ಪ್ರೊಫೈಲ್ 2. ಲಿಪಿಡ್ ಪ್ರೊಫೈಲ್ 3. ಕಂಪ್ಲೀಟ್ ಬ್ಲಡ್ ಪಿಕ್ಚರ್ ಟೆಸ್ಟ್.

ಮಾರನೇಯ ದಿನ ಆ ರೋಗಿಯು ಎಲ್ಲ ತಪಾಸಣಾ ವರದಿಗಳೊಂದಿಗೆ ನನ್ನನ್ನು ಭೇಟಿಯಾದರು. ಅವರ **ಟಿಎಸ್‌ಹೆಚ್ ಮಟ್ಟವು** 35 ಎಂಐಯು ಸಿಬಿಪಿ ಆಗಿತ್ತು ಮತ್ತು ಲಿಪಿಡ್ ಪ್ರೊಫೈಲ್ ಸಹಜವಾಗಿತ್ತು. ಅವರ **ಕೇಸ್‌ನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿದ ಬಳಿಕ,** ನಾನು ಅವರಿಗೆ ಕಾನ್‌ಸ್ಟಿಟ್ಯೂಷನ್ ಆಧಾರಿತ ಸಿಮಿಲಿಯಂ (ಮೆಡಿಸಿನ್) ಜೊತೆಗೆ ಡಯೆಟ್ ಚಾರ್ಟ್, ವ್ಯಾಯಾಮ ಮತ್ತು ಮ್ಯಾನೇಜ್‌ಮೆಂಟ್ ಯೋಜನೆಗಳನ್ನು ಶಿಫಾರಸ್ಸು ಮಾಡಿದೆ.

ಮಾರನೇಯ ತಿಂಗಳಿನಲ್ಲಿ ಅವರಿಗೆ ಹಸಿವಿನ ಅನುಭವ ಆಗತೊಡಗಿತ್ತು ಮತ್ತು ಕೆಲಸದಲ್ಲಿ ಒಂದಿಷ್ಟು ಕ್ರಿಯಾಶೀಲತೆ ಕಂಡುಬಂದಿತ್ತು ಹಾಗೂ ತೂಕದಲ್ಲಿ ಸ್ವಲ್ಪ ಇಳಿಕೆ ಆಗಿತ್ತು ಎಂದರೆ 83 ಕಿ.ಗ್ರಾಂ.ಗೆ ಇಳಿದಿತ್ತು. ನಂತರ ಎರಡನೇ ತಿಂಗಳಲ್ಲಿ ತೂಕ 80 ಕಿ.ಗ್ರಾಂ.ಗೆ ಇಳಿದಿತ್ತು ಮತ್ತು ಮೂರನೇ ತಿಂಗಳಲ್ಲಿ 75 ಕಿ.ಗ್ರಾಂ.ಗೆ ಕುಸಿದಿತ್ತು ಹಾಗೂ ಅವರು ಚೈತನ್ಯ ಮತ್ತು ಲವಲವಿಕೆಯಿಂದ ಜೀವಿಸತೊಡಗಿದ್ದರು.

ಇವೆಲ್ಲ ಬದಲಾವಣೆಳನ್ನು ಕಂಡು, ನಾನು ಅವರಿಗೆ ಮತ್ತೆ ಥೈರಾಯ್ಡ್ ಪ್ರೊಫೈಲ್ ತಪಾಸಣೆ ಮಾಡಿಸಿಕೊಳ್ಳಲು ಸೂಚಿಸಿದೆ. ಈ ಬಾರಿ ಅವರ ಟಿಎಸ್‌ಹೆಚ್ ಮಟ್ಟವು 10ಐಯು ಆಗಿತ್ತು;

ಆದ್ದರಿಂದ ನಾನು ಅವರಿಗೆ ಡಯೆಟ್ ಪಾಲನೆ, ವ್ಯಾಯಾಮ ಮತ್ತು ಔಷಧಿ ಸೇವನೆ ನಿಲ್ಲಿಸದೆ ಮುಂದುವರೆಸಿ. ಈ ಚಿಕಿತ್ಸೆಯನ್ನು ಒಂದು ವರ್ಷದವರೆಗೆ ಪಾಲಿಸಿ ಮತ್ತು ಪ್ರತಿ ಮೂರು ತಿಂಗಳಿಗೊಂದು ಬಾರಿ ಥೈರಾಯ್ಡ್ ಪ್ರೊಫೈಲ್ ತಪಾಸಣೆ ಮಾಡಿಸುತ್ತ, ಅದು ಸಹಜ ಸ್ಥಿತಿಯಲ್ಲಿ ನಿರ್ವಹಣೆಗೊಳ್ಳುತ್ತಿದೆಯೆ ಎಂಬುದನ್ನು ಖಚಿತ ಪಡಿಸಿಕೊಳ್ಳೋಣ ಎಂದು ಹೇಳಿದೆ. ಕ್ರಮೇಣ ಆ ರೋಗಿಯ ತೂಕವು ಬಿಎಂಐ ಅನ್ವಯ ಸಹಜ ಪ್ರಮಾಣಕ್ಕೆ ತಲುಪಿತ್ತು.



ಹೀಗಾಗಿ, ಈ ಮೂಲಕ ನಾನು ಎಲ್ಲರಿಗೂ ಹೇಳಬಯಸುವುದು ಏನೆಂದರೆ ನಿಮ್ಮಲ್ಲಿ ಯಾರಿಗಾದರೂ ಥೈರಾಯ್ಡ್ ಸಮಸ್ಯೆ ಬಾಧಿಸುತ್ತಿದ್ದರೆ ಅಥವಾ/ಮತ್ತು ನಿಮ್ಮಲ್ಲಿ ಥೈರಾಯ್ಡ್ ಲಕ್ಷಣಗಳು ಕಂಡುಬಂದರೆ ದಯವಿಟ್ಟು ನಿಮ್ಮ ಆರೋಗ್ಯವನ್ನು ನಿರ್ಲಕ್ಷಿಸದೆ ಪಾಸಿಟಿವ್ ಹೋಮಿಯೋಪತಿ ಕ್ಲಿನಿಕ್‌ಗಳಿಂದ ಕಾನ್‌ಸ್ಟಿಟ್ಯೂಷನಲ್ ಚಿಕಿತ್ಸೆ ಪಡೆದುಕೊಳ್ಳಿರಿ. ಸೂಕ್ತ ಚಿಕಿತ್ಸೆ ಪಡೆದುಕೊಳ್ಳುವ ಮೂಲಕ ಕಾಯಿಲೆಯ ಎಲ್ಲಾ ತೀವ್ರತೆಗಳನ್ನು ನಿವಾರಿಸಬಹುದು.


ಟಿಎಸ್‌ಹೆಚ್ ಮಟ್ಟವು ಹೆಚ್ಚಾದಂತೆ ಹೈಪೋಥೈರಾಯ್ಡ್ ಎಂದು ಕರೆಯಲಾಗುವ ಒಂದು ಸ್ಥಿತಿ ಉದ್ಭವಿಸುತ್ತದೆ. ಈ ಟಿಎಸ್‌ಹೆಚ್ ಮಟ್ಟವು ಸಾಮಾನ್ಯವಾಗಿ 5.5 ಎಂಐಯು ಪ್ರಮಾಣವನ್ನು ಮೀರಿದಾಗ ಇಂತಹ ಹೈಪೋಥೈರಾಯ್ಡ್ ಗೋಚರಿಸುತ್ತದೆ. ಇಂತಹ ಸ್ಥಿತಿಗೆ ಒಳಗಾದ ವ್ಯಕ್ತಿಯ ತೂಕದಲ್ಲಿ ಹೆಚ್ಚಳವಾಗುತ್ತದೆ, ಏಕಾಗ್ರತೆಗೆ ಹಾನಿಯುಂಟಾಗುತ್ತದೆ, ಸದಾಕಾಲ ನಿಶ್ಯಕ್ತತೆ ಆವರಿಸಿದಂತಾಗುತ್ತದೆ. ಮುಖ್ಯವಾಗಿ ಇವೆಲ್ಲ ಬಿಎಂಆರ್ (ಬೇಸಲ್ ಮೆಟಾಬೊಲಿಕ್ ರೇಟ್) ಕುಸಿತದ ಕಾರಣದಿಂದಾಗಿ ಉಂಟಾಗುತ್ತವೆ. ಇನ್ನು ಟಿಎಸ್‌ಹೆಚ್ ಕುಸಿತಗೊಳ್ಳುವುದರಿಂದ ಹೈಪರ್‌ಥೈರಾಯ್ಡ್ ಎಂದು ಕರೆಯಲಾಗುವ ಸ್ಥಿತಿ ಉದ್ಭವಿಸುತ್ತದೆ ಮತ್ತು ಈ ಸ್ಥಿತಿಗೆ ಒಳಗಾಗುವ ವ್ಯಕ್ತಿಯಲ್ಲಿ ಸಿಡುಕುತನ, ಸ್ನಾಯು ದೌರ್ಬಲ್ಯ, ಗರಿಷ್ಠ ಹೆಚ್‌ಆರ್, ಶಾಖ ಅಸಹಿಷ್ಣತೆ, ತೂಕ ಹಾನಿ ಉಂಟಾಗುವುದು ಗೋಚರಿಸುತ್ತವೆ ಮತ್ತು ಥೈರಾಯ್ಡ್ ಗ್ರಂಥಿ ಕೂಡ ವಿಕಸನಗೊಂಡಿರುವುದು ಕಂಡುಬರುತ್ತದೆ.

ಕ್ಯಾಲ್ಷಿಯಂ ಮೆಟಬಾಲಿಸಂನಲ್ಲಿ ಪ್ರಮುಖ ಪಾತ್ರವಹಿಸುವ ಹಾಗೂ ಥೈರಾಯ್ಡ್ ಗ್ರಂಥಿಯಿಂದ ಬಿಡುಗಡೆಯಾಗುವ ಕ್ಯಾಲ್ಸಿಟೋನೈನ್ ಎಂಬ ಇನ್ನೊಂದು ಹಾರ್ಮೋನ್ ಅಸ್ತಿತ್ವದಲ್ಲಿದೆ. ಇಂತಹ ಕ್ಯಾಲ್ಸಿಟೋನೈನ್ ಕಡಿಮೆ ಆಗುವುದರಿಂದಾಗಿ ಕೂಡ ಕ್ಯಾಲ್ಷಿಯಂ ಕೊರತೆ ಉಂಟಾಗುತ್ತದೆ.

ನಮ್ಮ ಪಾಸಿಟಿವ್ ಹೋಮಿಯೋಪತಿ ಶಾಖೆಗಳಿಗೆ ಭೇಟಿ ನೀಡುವ ಬಹುತೇಕ ರೋಗಿಗಳು ದಾಖಲಿಸುವ ಸಾಮಾನ್ಯ ಸಮಸ್ಯೆಗಳೆದರೆ –> ಅನಿಯಮಿತ ಋತುಚಕ್ರ, ಜಡತ್ವ, ಮಂದ/ಕುಂದಿತ ಮಾನಸಿಕ ಸ್ಥಿತಿಗತಿ, ಸದಾ ತೂಕಡಿಕೆ, ಕಡುನಿದ್ದೆ, ಕೂದಲು ಉದುರುವಿಕೆ, ಸ್ಥೂಲಕಾಯ/ತೂಕ ಕಳೆದುಕೊಳ್ಳುವುದನ್ನು ನಿಭಾವಣೆಯಲ್ಲಿ ಕೊರತೆ, ಎದೆಯುಬ್ಬಸ.

### ಪಾಸಿಟಿವ್ ಹೋಮಿಯೋಪತಿ ಚಿಕಿತ್ಸೆ:

ಥೈರಾಯ್ಡ್ ಕಾಯಿಲೆಗೆ ನೀಡಲಾಗುವ ಕನ್ವೆನ್ಷನಲ್ ಚಿಕಿತ್ಸೆಯಲ್ಲಿ ಜೀವಾವಧಿವರೆಗೆ ಔಷಧೋಪಚಾರ ನೀಡಬೇಕಾಗುತ್ತದೆ. ಒಬ್ಬ ವ್ಯಕ್ತಿಗೆ ಚಿಕಿತ್ಸೆ ನೀಡಬೇಕಾದರೆ, ಆ ವ್ಯಕ್ತಿಯ ದೈಹಿಕ ಗುಣಲಕ್ಷಣಗಳಾದ ಹಸಿವು, ದಾಹ, ಕರುಳುಗಳು, ನಿದ್ರೆ ಇತ್ಯಾದಿಗಳನ್ನು ಸಮಗ್ರವಾಗಿ ಪರಿಗಣಿಸುವುದು ಮತ್ತು ವ್ಯಕ್ತಿಯ ಮಾನಸಿಕ ಭಾವನೆಗಳ ಸ್ಥಿತ್ಯಂತರಗಳಿಗೆ ಕಾರಣವಾಗಬಲ್ಲ ಅಂಶಗಳು ಅಥವಾ ಘಟಣೆಗಳನ್ನು ಕೂಡ ಪರಿಗಣಿಸುತ್ತ, ಅಂತಿಮವಾಗಿ ವ್ಯಕ್ತಿಯನ್ನು ಯಾವುದೇ ರೀತಿಯ ಕಾಯಿಲೆಯಿಂದ ಮುಕ್ತಗೊಳಿಸುವುದೇ ಪಾಸಿಟಿವ್ ಹೋಮಿಯೋಪತಿಯ ಮುಖ್ಯ ಉದ್ದೇಶವಾಗಿದೆ.



ಹೋಮಿಯೋಪತಿಯಲ್ಲಿ ನಾವು, ಯಾವುದೇ ಕಾಯಿಲೆಗೆ ಅದರಲ್ಲಿ ಕೊರತೆ ಅಥವಾ ಹೆಚ್ಚುವರಿಗಳಿಗೆ ಪೂರಕಗಳನ್ನು ಒದಗಿಸುವುದರ ಬದಲಾಗಿ ಥೈರಾಯ್ಡ್ ಗ್ರಂಥಿಯ ಚಟುವಟಿಕೆಗಳನ್ನು ಸಮರ್ಥವಾಗಿ ಪುನಶ್ಚೇತನಗೊಳಿಸುವುದಕ್ಕೆ ಹೆಚ್ಚಿನ ಆದ್ಯತೆ ನೀಡುತ್ತೇವೆ. ನಮ್ಮೊಳಗಿನ ರೋಗನಿರೋಧಕ ವ್ಯವಸ್ಥೆಯು ಕೂಡ ಗಾಳಿ, ನೀರು ಮತ್ತು ಆಹಾರದಲ್ಲಿರುವ ವಿಷಕಾರಿ ಅಂಶಗಳ ದಾಳಿಗೆ ನಿರಂತರವಾಗಿ ಈಡಾಗುತ್ತಿರುತ್ತದೆ. ಇಂತಹ ಮಾಲಿನ್ಯಕಾರಕಗಳು ನಮ್ಮ ರೋಗನಿರೋಧಕ ವ್ಯವಸ್ಥೆಯನ್ನು ಅತ್ಯಧಿಕವಾಗಿ ಘರ್ಷಿಸುತ್ತ, ಸ್ವಯಂನಿರೋಧಕ ಪ್ರತಿಕ್ರಿಯೆಗಳನ್ನು ಸೃಷ್ಟಿಸುತ್ತವೆ ಮತ್ತು ಥೈರಾಯ್ಡ್ ಚಟುವಟಿಕೆಗಳಿಗೆ ಧಕ್ಕೆಯನ್ನುಂಟು ಮಾಡುತ್ತವೆ.

ಹೋಮಿಯೋಪತಿಯಲ್ಲಿ ನಾವು ಕಾನ್‌ಸ್ಟಿಟ್ಯೂಷನಲ್ ಚಿಕಿತ್ಸೆ ನೀಡುತ್ತೇವೆ, ಇದು ನೈಸರ್ಗಿಕ ರೀತಿಯಲ್ಲಿ ಥೈರಾಯ್ಡ್ ಗ್ರಂಥಿಯ ಚಟುವಟಿಕೆಗಳನ್ನು ಸುಧಾರಿಸುವುದರ ಮೇಲೆ ಹೆಚ್ಚು ಪ್ರಭಾವ ಬೀರುತ್ತದೆ. ನಮ್ಮ ಕಾನ್‌ಸ್ಟಿಟ್ಯೂಷನಲ್ ಪರಿಹಾರಗಳು ದೇಹವನ್ನು ಉತ್ತೇಜಿಸುವ ಮೂಲಕ ಥೈರಾಯ್ಡ್ ಗ್ರಂಥಿಯ ಸ್ರವಿಸುವಿಕೆಯನ್ನು ಪುನಶ್ಚೇತನಗೊಳಿಸುತ್ತವೆ. ನಮ್ಮ ಥೈರಾಯ್ಡ್ ಚಿಕಿತ್ಸೆಯಲ್ಲಿ ನಾವು ಶಕ್ತಿ ವರ್ಧನೆಗೆ, ಪರಿಚಲನೆ ಸುಧಾರಣೆಗೆ ಒತ್ತು ನೀಡುವ ಮೂಲಕ ಹೈಪೊ ಜೊತೆಗೆ ಹೈಪೋಥೈರಾಯ್ಡ್ ಚಟುವಟಿಕೆಗಳನ್ನು ಸಮತೋಲಗೊಳಿಸಲು ಬೆಂಬಲ ಒದಗಿಸುತ್ತೇವೆ. ಇದನ್ನು ಹೈಪೊ ಮತ್ತು ಹೈಪರ್ ಥೈರಾಯ್ಡ್ ಚಟುವಟಿಕೆ ಎರಡನ್ನೂ ನಿಯಂತ್ರಿಸಲು ಪೂರಕವಾಗಿಯೂ ಕೂಡ ಬಳಸಬಹುದಾಗಿದೆ.

ಕರ್ನಾಟಕ: ಮಲ್ಲೇಶ್ವರಂ ▪ ಕೋರಮಂಗಲ ▪ ರಾಜಾಜಿನಗರ
▪ ಇಂದಿರಾನಗರ ▪ ಜಯನಗರ ▪ ಹುಬ್ಬಳ್ಳಿ ▪ ಮಂಗಳೂರು ▪ ಬೆಳಗಾವಿ
▪ ದಾವಣಗೆರೆ ▪ ಗುಲ್ಬರ್ಗ ▪ ಮೈಸೂರು | ಆಂಧ್ರಪ್ರದೇಶ

ಉಚಿತ 300/- ಸಮಾಲೋಚನ ಶುಲ್ಕ
ವೈದ್ಯರೊಂದಿಗೆ ಮಾತನಾಡಿ 9686199985